# ‘ಮರೆಯಲಾಗದ ಮೈಸೂರು..’

**ಬ್ರೆಜಿಲ್‌ನಿಂದ ಬಂದ ಅನಾ ಕ್ಯಾರೊಲಿನ ಇಲ್ಲಿಗೆ ಬಂದ ಆರಂಭದಲ್ಲಿ ಮತ್ತೆ ವಾಪಸ್ ಹುಟ್ಟೂರಿಗೆ ಹೋಗೋಣ ಎನಿಸಿತ್ತಂತೆ. ಆದರೆ ಈಗ ತಮ್ಮ ನಿರ್ಧಾರ ಬದಲಿಸಿದ್ದಾರೆ..!**



ಅನಾ ಕ್ಯಾರೊಲಿನ. ಚಿತ್ರ: ಕಿಶೋರ್ ಕುಮಾರ್ ಬೋಳಾರ್

ಮೈಸೂರು ಚಂದದ ಊರು ಎಂದರೆ ಯಾರು ಇಲ್ಲ ಎನ್ನುತ್ತಾರೆ ಹೇಳಿ. ವಿದೇಶದಿಂದ ಬಂದವರಿಗೂ ಮೈಸೂರಿನ ಸೊಬಗು ಥಟ್ಟನೆ ಸೆಳೆಯುತ್ತದೆ. ಅಂದ ಹಾಗೆ ಬ್ರೆಜಿಲ್‌ನಿಂದ ಭಾರತಕ್ಕೆ ಬಂದ ಅನಾ ಕ್ಯಾರೊಲಿನ ಅವರಿಗೂ ಮೈಸೂರು ಬಹಳ ಹಿಡಿಸಿದೆಯಂತೆ.

ಬೆಂಗಳೂರಿಗೆ ಎರಡು ವರ್ಷ ಹಿಂದೆ ಬಂದ ಅನಾ ಇದಕ್ಕೂ ಮುನ್ನ ಸ್ನೇಹಿತೆಯರ ಜತೆ ಮೈಸೂರಿಗೆ ಪ್ರವಾಸ ಬಂದಿದ್ದರು. ಮೈಸೂರು ನಗರದ ಅಂದ ಚಂದಕ್ಕೆ ಮಾರು ಹೋಗಿದ್ದರು. ಒಂದು ವಾರ ಕಾಲ ತಂಗಿ ಇಡೀ ಮೈಸೂರಿನ ಸೊಬಗನ್ನು ಕಣ್ತುಂಬಿಕೊಂಡಿದ್ದರು. ಅದು ದಸರಾ ಸಂದರ್ಭ ಬೇರೆ. ಮದುವಣಗಿತ್ತಿಯಂತೆ ಶೃಂಗಾರಗೊಂಡು ಇಡೀ ನಗರಿ ಸಡಗರದಲ್ಲಿ ಮಿಂದೇಳುತ್ತಿತ್ತು. ಈ ಸಂಭ್ರಮದಲ್ಲಿದ್ದಾಗಲೇ ಅನಾಗೆ ದುಃಖದ, ಕಷ್ಟದ ಸನ್ನಿವೇಶವೊಂದು ಎದುರಾಯಿತು. ಅನಾಳ ಪರ್ಸ್, ಪಾಸ್‌ಪೋರ್ಟ್, ಮೊಬೈಲ್ ಫೋನ್ ಎಲ್ಲವನ್ನೂ ಯಾರೂ ಕಳ್ಳತನ ಮಾಡಿದ್ದರು. ಇದು ಅನಿರೀಕ್ಷಿತ ಆಗಿರುವುದರಿಂದ ಆಕೆಗೆ ವಾಪಸ್ ಬ್ರೆಜಿಲ್ ಹೋಗುವುದು ಹೇಗೆ ಎಂಬ ಚಿಂತೆ ಕಾಡಿತು. ಮೊದಲು ಪೊಲೀಸ್‌ರಿಗೆ ದೂರು ನೀಡಿದರು. ಪೊಲೀಸರ ಸಲಹೆಯಂತೆ ಬೆಂಗಳೂರಿಗೆ ಬಂದ ಅನಾ ಇಲ್ಲಿನ ರಾಯಭಾರ ಕಛೇರಿಗೆ ಹೋಗಿ ತನ್ನ ಅಳಲನ್ನು ತೋಡಿಕೊಂಡರಂತೆ. ಈ ಘಟನೆ ನಡೆದು ಕೇವಲ ಮೂರೇ ವಾರದಲ್ಲಿ ಅನಾ ಫೇಸ್‌ಬುಕ್ ಅಕೌಂಟ್‌ಗೆ ಮೈಸೂರು ಪೊಲೀಸರಿಂದ ಸಂದೇಶವೊಂದು ಬಂದು, ‘ಅನಾ ಕಳೆದುಕೊಂಡ ಎಲ್ಲ ವಸ್ತುಗಳೂ ಜಪ್ತಿಯಾಗಿದ್ದು, ಯಾವುದೇ ಆತಂಕ ಪಡುವ ಅಗತ್ಯವಿಲ್ಲ’ ಎಂದು ತಿಳಿಸಲಾಯಿತು. ಆಗ ಅನಾಗೆ ಆದ ಅಚ್ಚರಿ ಮತ್ತು ಸಂತೋಷಕ್ಕೆ ಪಾರವೇ ಇರಲಿಲ್ಲವಂತೆ. ಇದು ಆಕೆಯ ಬದುಕಿನಲ್ಲಿ ಎಂದೂ ಮರೆಯಲಾರದ ಘಟನೆಯಾಗಿ ಮನದಾಳದಲ್ಲಿ ಗಟ್ಟಿಯಾಯಿತಂತೆ.

ಅನಾ ಈ ವಿಷಯ ವಿವರಿಸುವಾಗ ಅಕ್ಷರಶಃ ಭಾವುಕರಾಗಿದ್ದರು. ಅಲ್ಲಿಂದ ಮೇಲೆ ಅವರಿಗೆ ಭಾರತದ, ಬೆಂಗಳೂರು, ಮೈಸೂರುಗಳ ಮೇಲೆ ಪ್ರೀತಿ ಬೆಳೆಯಿತು. ವಾಪಸ್ ಹೋಗಿ ಬ್ರೆಜಿಲ್‌ನಲ್ಲೇ ನೆಲೆಸಬೇಕು ಎಂದು ನಿರ್ಧರಿಸಿದ್ದ ಅನಾ ಮತ್ತೆ ತಮ್ಮ ನಿರ್ಧಾರ ಬದಲಿಸಿದ್ದಾರೆ. ಸದ್ಯ ಬೆಂಗಳೂರಿನಲ್ಲಿ ‘ಗ್ರೀನ್‌ಬುಕ್ಸ್ ಲರ್ನಿಂಗ್ ಸಲ್ಯೂಷನ್’ ಕಂಪೆನಿಯಲ್ಲಿ ಪ್ರಾಜೆಕ್ಟ್ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದ್ದಾರೆ.

ಈ ದೇಶದ ಬಗ್ಗೆ, ಬೆಂಗಳೂರಿನ ಬಗ್ಗೆ ಅಂತರ್ಜಾಲದಲ್ಲಿ ತಡಕಾಡಿ ಮೊದಲೇ ವಿಷಯ ಕಲೆ ಹಾಕಿದ್ದ ಅನಾ, ಮುಂಬಯಿ, ದೆಹಲಿ, ಕೋಲ್ಕತ್ತಾ.. ಹೀಗೆ ಮಹಾನಗರಗಳಲ್ಲಿ ಯಾವುದು ಉತ್ತಮ ಎಂಬುದನ್ನೂ ಲೆಕ್ಕಾಚಾರ ಹಾಕಿದ್ದಾರೆ. ಆದರೆ ಕೊನೆಗೆ ಇಲ್ಲೇ ಬಂದು ಉದ್ಯೋಗ ಹಿಡಿಯುವ ತೀರ್ಮಾನ ಮಾಡಿದರು ಅನಾ.

‘ಬೆಂಗಳೂರಿನ ವಾತಾವರಣ, ಉದ್ಯೋಗಾವಕಾಶ ಮತ್ತು ಇಲ್ಲಿ ಸಿಗುವ ಊಟ ತಿಂಡಿಗಳ ವೈವಿಧ್ಯ ಕಂಡು ನಿಜವಾಗಿಯೂ ಬೆರಗಾಗಿದ್ದೇನೆ. ಕೋರಮಂಗಲದಲ್ಲಿರುವ ‘ಮಸ್ಟರ್ಡ್ ಕೆಫೆ’ಗೆ ವಾರಕ್ಕೆ ಕನಿಷ್ಠ ಎರಡು ಬಾರಿಯಾದರೂ ಭೇಟಿ ನೀಡಿ ‘ಹಾಟ್ ಚಾಕೊಲೇಟ್’ ಸವಿಯುತ್ತೇನೆ. ದಕ್ಷಿಣ ಭಾರತೀಯ ತಿಂಡಿಗಾಗಿ ‘ಏರ್‌ಲೈನ್ಸ್ ಹೋಟೆಲ್’ಗೆ ಹೋಗುತ್ತೇನೆ. ಶುದ್ಧ ಸಸ್ಯಾಹಾರಿಯಾದ ನಾನು ಉತ್ತರಭಾರತೀಯ ಶೈಲಿಯ ಊಟದಲ್ಲಿ ಚಪಾತಿ, ನಾನ್, ಸಲಾಡ್ ಇಷ್ಟಪಡುತ್ತೇನೆ’ ಎಂದು ತಮ್ಮ ಆಹಾರ ಪದ್ಧತಿಯ ಬಗ್ಗೆ ವಿವರ ನೀಡುತ್ತಾರೆ ಈ ಬ್ರೆಜಿಲ್ ಬೆಡಗಿ.

ಹಾಗೆಂದು ಬ್ರೆಜಿಲ್‌ನಲ್ಲೂ ಭಾರತೀಯ ಕ್ರಮದ ಊಟ ತಿಂಡಿಗಳು ಸಿಗುತ್ತವೆ. ಅದರ ರುಚಿಯನ್ನೂ ಕಂಡಿದ್ದೇನೆ. ಆದರೆ ಇಲ್ಲಿ ಸಿಗುವಷ್ಟು ವೆರೈಟಿ ಬೇರೆಲ್ಲೂ ಸಿಗದು’ ಎಂದು ಹೇಳುತ್ತಾರೆ.

ಬ್ರೆಜಿಲ್‌ನ ಬಲ್ನೆರಿಯೊ ಕಾಂಬೊರಿಯು ಎಂಬ ಜಾಗ ಅನಾ ಅವರ ತವರೂರು ಅಂತೆ. ಅದು ಬೀಚ್‌ಗಳಿಂದ ಸುತ್ತುವರಿದ ಪ್ರದೇಶ. ಅಲ್ಲಿನ ವಿಶ್ವವಿದ್ಯಾಲಯಗಳು ಬಹಳ ಜನಪ್ರಿಯ ಹಾಗೂ ಜನಸಂಖ್ಯೆಯ ಬಹುಪಾಲು ವಿದ್ಯಾರ್ಥಿಗಳು ಮತ್ತು ವಿಶ್ರಾಂತ ವೃತ್ತಿಪರರಿಂದ ಕೂಡಿದ್ದು ಸುಶಿಕ್ಷಿತರೇ ಹೆಚ್ಚಿರುವ ಜಾಗವಂತೆ. ಬೀಚ್‌ನ ಸುತ್ತಲೂ ಸುಂದರವಾದ ಪಾರ್ಕ್ ಇದ್ದು ಸಂಜೆಯ ವಾಯುವಿಹಾರಕ್ಕೆ ಪ್ರಶಸ್ತವಾದ ಸ್ಥಳವಂತೆ. ‘ನಾನು ಇದನ್ನೆಲ್ಲ ಮಿಸ್ ಮಾಡಿಕೊಳ್ಳುತ್ತೇನೆ ಎನಿಸುತ್ತಿದೆ’ ಎಂದು ಮರುಗುತ್ತಾರೆ. ‘ಆದರೆ ಇವೆಲ್ಲವನ್ನೂ ಬೆಂಗಳೂರು ಮರೆಸುತ್ತದೆ. ಇದು ಬಹಳ ಸುಂದರ ನಗರ. ಇಲ್ಲಿನ ಜನ ಸ್ನೇಹಪರರು. ದೂರದಿಂದ ಬಂದು ಭಾಷೆ, ಸಂಸ್ಕೃತಿ ತಿಳಿಯದಿದ್ದರೂ ಇಲ್ಲಿ ಕಷ್ಟವಾಗಲೇ ಇಲ್ಲ. ಇನ್ನು ಎಷ್ಟು ದಿನ ಇಲ್ಲಿರುತ್ತೇನೋ ಗೊತ್ತಿಲ್ಲ. ಆದರೆ ಇರುವಷ್ಟು ದಿನ ಬದುಕನ್ನು ಬಹಳ ಎಂಜಾಯ್ ಮಾಡ್ತೇನೆ. ‘ರಿಯಲಿ ಐ ಆ್ಯಮ್ ಲಕ್ಕಿ ಟು ಬಿ ಹಿಯರ್ ನೌ ಆ್ಯಸ್ ಎ ಬ್ಯಾಂಗಲೂರಿಯನ್..’ ಎಂದು ಮಾತಿಗೆ ಪೂರ್ಣವಿರಾಮ ಹಾಕುತ್ತಾರೆ ಅನಾ.

★ ಅವನೀಶ್